# ಮಂಗಳ ಗ್ರಹದಲ್ಲಿ ಪುಟ್ಟಿ

ಅ) ಬಿಟ್ಟ ಸ್ಥಳವನ್ನು ತುಂಬಿರಿ. (Fill in the blanks)

೧. ಒಂದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆ ಬಂದಿತ್ತು.

೨. ಹಾರುತ ತೇಲುತ ಮುಂದಕೆ ಸಾಗಿ ಚಂದ್ರನ ಮಡಿಲನು ಸೇರಿದಳು.

೩. ಪುಟ್ಟಿಯೇ ನಮ್ಮ ಮಂಗಳಗ್ರಹದ ದುರಂತ ಕಥೆಯನ್ನು ಕೇಳಿ ತಿಳಿ.

೪. ಹಸಿರನು ಅಳಿಸದೆ ಗಿಡಮರ ಬೆಳೆಸಿ ಉಳಿಸುವೆವೆಂದಳು ಈ ಧರೆಯ.

ಆ) ಒಂದು ವಾಕ್ಯದಲ್ಲಿ ಉತ್ತರಿಸಿರಿ. (Answer the following questions in one sentence)

೧. ಪುಟ್ಟಿಗೆ ಯಾರ ಹಾಗೆ ಹಾರುವ ಮನಸ್ಸಿತ್ತು?

ಉ: ಪುಟ್ಟಿಗೆ ಹಕ್ಕಿಯ ಹಾಗೆ ಹಾರುವ ಮನಸ್ಸಿತ್ತು.

೨. ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಎಲ್ಲಿಗೆ ಸೇರಿದಳು?

ಉ: ಚಂದ್ರನ ಬಿಟ್ಟು ಮೇಲೆ ಹಾರಿದ ಪುಟ್ಟಿ ಮಂಗಳನ ಅಂಗಳಕ್ಕೆ ಸೇರಿದಳು.

೩. ಪುಟ್ಟಿ ಯೋಗಿಗೆ ಏನೆಂದು ಕೇಳಿದಳು?

ಉ: ಪುಟ್ಟಿ ಯೋಗಿಗೆ "ನೀನು ಹೇಗೆ ಇಲ್ಲಿಗೆ ಬಂದೆ?" ಎಂದು ಕೇಳಿದಳು.

೪. ಮಂಗಳ ಗ್ರಹದಲ್ಲಿ ಬರ ಏಕೆ ಬಂದಿತು?

ಉ: ಆಗಿನ ಜನತೆಯು ನಾಡನು ಕಟ್ಟಲು, ಮರಗಳನ್ನು ಕಡಿದರು. ಇದರಿಂದಾಗಿ ಬರ ಬಂದಿತು.

೫. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?

ಉ: ಪುಟ್ಟಿ ಜನರಲ್ಲಿ ಹಸಿರನ್ನು ಉಳಿಸಲು ಬೇಡಿದಳು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ

ಇ. ಪದ್ಯಭಾಗವನ್ನು ಪೂರ್ಣಗೊಳಿಸಿರಿ. (Complete the poem)

ಆಗಸದಲ್ಲಿ ಹಾರುವುದೆಂದರೆ
ಪುಟಾಣಿ ಪುಟ್ಟಿಗೆ ಬಲು ಇಷ್ಟ
ರೆಕ್ಕೆಗಳಿಲ್ಲದೆ ಹಾರಲು ಹೋದರೆ
ಆಗದೆ ತೊಂದರೆ ? ಇದು ಕಷ್ಟ

ಮಳೆಬೆಳೆ ಕಾಣದೆ ಜೀವಿಯು ಅಳಿದು
ಬಂದಿತು ನಮಗೆ ಇಂಥ ಸ್ಥಿತಿ
'ನಿಮ್ಮ ಭೂಮಿಯಲ್ಲಿ ಗಿಡಮರ ಅಳಿದರೆ
ಮುಂದೆ ಒಂದು ದಿನ ಇದೇ ಗತಿ'

ಈ) ಸಿ.ಎಂ.ಗೋವಿಂದರೆಡ್ಡಿಯವರ ಸ್ಥಳ , ಕಾಲ , ಕೃತಿಗಳ ವಿವರ ತಿಳಿಸಿರಿ. (Write place, time and novels of C M Govinda Reddy)

ಸಿ.ಎಂ.ಗೋವಿಂದರೆಡ್ಡಿಯವರು ೧೧.೦೮.೧೯೫೮ ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಚೆನ್ನಿಗರಾಯನಪುರ ಎಂಬ ಗ್ರಾಮದಲ್ಲಿ ಜನಿಸಿದರು . ಪ್ರಸ್ತುತ ಇವರು ಬೆಂಗಳೂರಿನ ಕಾಡುಗೋಡಿನ ಪ್ರಥಮ ದರ್ಜೆಕಾಲೇಜಿನಲ್ಲಿ ಕನ್ನಡ  ಸಹಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮಕ್ಕಳ ಸಾಹಿತ್ಯ ರಚನೆಯಲ್ಲಿ ವಿಶೇಷ ಆಸಕ್ತಿ ಹೊಂದಿದ ಇವರು 'ಬಣ್ಣದ ಚಿಟ್ಟೆ' 'ಮಕ್ಕಳ ಮಂದಾರ' 'ಪದ್ಯ ಹೇಳುವ ಮರ' ಮೊದಲಾದ ಕೃತಿಗಳನ್ನುರಚಿಸಿದ್ದಾರೆ. ಇವರಿಗೆ 'ಪರ್ಲ ಕಾವ್ಯ ಪ್ರಶಸ್ತಿ'  'ಸಿಸು ಸಂಗಮೇಶದತ್ತಿ  ಬಹುಮಾನ' ಸೇರಿದಂತೆ ವಿವಿಧ ಬಹುಮಾನಗಳು ದೊರೆತಿವೆ.

ಉ) ನಾಮಪದ , ನಾಮಪ್ರಕೃತಿ , ಮತ್ತು ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.

೧. ಗಗನ + ಅನ್ನು = ಗಗನವನ್ನು

ಉ: ನಾಮಪ್ರಕೃತಿ + ದ್ವಿತೀಯ ವಿಭಕ್ತಿ = ನಾಮಪದ

೨. ಶಾಲೆ + ಇಂದ = ಶಾಲೆಯಿಂದ

ಉ: ನಾಮಪ್ರಕೃತಿ + ತೃತೀಯ ವಿಭಕ್ತಿ = ನಾಮಪದ

ಊ) ಕೊಟ್ಟಿರುವ ವಾಕ್ಯಗಳಲ್ಲಿರುವ ಗುಣವಾಚಕ ( ವಿಶೇಷಣ ) ಗಳನ್ನು ಗುರುತಿಸಿರಿ. (Adjective)

ಉದಾ : ವಿವೇಕನಿಗೆ ಅಪಾರ ಬುದ್ದಿವಂತಿಕೆಯಿದೆ . – ಅಪಾರ

ರಫೀಕ್‌ನದು ದೊಡ್ಡಮನೆ - ದೊಡ್ಡ

ಅವಳಿಗೆ ಹಸಿರು ಬಣ್ಣ ಇಷ್ಟ - ಹಸಿರು

ಪುಟ್ಟಿಯು ಕಂಡಳು ಕೆಂಪು ಬಂಡೆಯನು - ಕೆಂಪು

ಋ) ಕೊಟ್ಟಿರುವ ವಾಕ್ಯಗಳಲ್ಲಿ ಸಂಖ್ಯಾವಾಚಕಗಳನ್ನು ಗುರುತಿಸಿ ಬರೆಯಿರಿ. (Write the numerals)

ಡೇವಿಡ್ ಊರಿನಲ್ಲಿ ನೂರು ಹಸುಗಳಿವೆ - ನೂರು

ಪೂರ್ಣಚಂದ್ರನು ಬೆಳಿಗ್ಗೆ ಐದು ಗಂಟೆಗೆ ಏಳುತ್ತಾನೆ - ಐದು

ಒಂದು ದಿನ ಇದ್ದಕ್ಕಿದ್ದಂತೆ ಪುಟ್ಟಿಗೆ ರೆಕ್ಕೆಯು ಬಂದಿತ್ತು - ಒಂದು

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ